**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ : 12-02-2024.**

**ಮುಂದುವರೆದ ಪಾಟೀ ಸವಾಲು - 1 ನೇ ಪ್ರತಿವಾದಿಯ ವಾರಸುದಾರರ ಪರ ವಕೀಲರಿಂದ :**

**1)** ದಾವಾಸ್ವತ್ತಿನ ಪೂರ್ವಕ್ಕೆ ಕಾಡಪ್ಪ ಅವರ ಜಮೀನು, ಪಶ್ಚಿಮಕ್ಕೆ ಚಿಕ್ಕಮುನಿಯಪ್ಪ ಅವರ ಜಮೀನು, ಉತ್ತರಕ್ಕೆ ನಾರಾಯಣಪ್ಪ ಅವರ ಜಮೀನು ಹಾಗೂ ದಕ್ಷಿಣಕ್ಕೆ ಬಚ್ಚಣ್ಣ ಅವರ ಜಮೀನುಗಳು ಇರುತ್ತವೆ. ದಾವಾಸ್ವತ್ತಿನ ಖಾತೆ ಕಾಡಪ್ಪ ಅವರ ಹೆಸರಿನಲ್ಲಿದೆ ಎಂದರೆ ಗೊತ್ತಿಲ್ಲ. ನನ್ನ ಪ್ರಕಾರ ದಾವಾ ಸ್ವತ್ತಿನ ಖಾತೆ ಕಾಡಪ್ಪ ಅವರ ಹೆಸರಿನಲ್ಲಿದೆ. 1986 ರಲ್ಲಿ ನಮ್ಮ ತಂದೆ ಮರಣ ಹೊಂದಿದ ಸಮಯದಲ್ಲಿ ನಮ್ಮ ಜಮೀನಗಳ ಪೌತಿ ಖಾತೆಯನ್ನು ಮಾಡಿಸಿಕೊಂಡಿದ್ದೇವೆ. ನಮಗೆ ಸೇರಿದ ಎಲ್ಲಾ ಜಮೀನುಗಳು ಪೌತಿ ಹಾತೆ ಮಾಡಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಕೆಲವು ಐಟಂ ಸ್ವತ್ತುಗಳು ಬಿಟ್ಟುಹೋಗಿದ್ದವು ಎಂದು ನುಡಿಯುತ್ತೇನೆ. ನಾನು ಮತ್ತು ನಮ್ಮ ಅಣ್ಣನ ಹೆಸರಿನಲ್ಲಿ ಜಂಟಿ ಖಾತೆ ಮಾಡಿಸಿಕೊಂಡಿದ್ದೇವೆ. ಆ ಸಮಯದಲ್ಲಿ ದಾವಾ ಸ್ವತ್ತಿನ ಪೌತಿ ಖಾತೆ ಮಾಡಿಸಲು ಏನು ತೊಂದರೆ ಇತ್ತು ಎಂದು ಕೇಳಲು ನಮಗೆ ಅಷ್ಟೊಂದು ಗೊತ್ತಿರಲಿಲ್ಲ ಎಂದು ನುಡಿಯುತ್ತೇನೆ. ಜಮೀನು ಇರುವ ಬಗ್ಗೆ ಆ ಸಮಯದಲ್ಲಿ ಗೊತ್ತಿತ್ತು. ಈವತ್ತಿಗೂ ಸಹ ದಾವಾ ಸ್ವತ್ತಿನ ಸ್ವಾಧೀನವನ್ನು 1 ನೇ ಪ್ರತಿವಾದಿ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ಅವರ ಸ್ವಾಧೀನವನ್ನು ಯಾರೂ ಸಹ ಪ್ರಶ್ನಿಸಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆ ಏನೆಲ್ಲಾ ವ್ಯವಹಾರಗಳನ್ನು ಮಾಡುತ್ತಿದ್ದರು ಎಂದು ನಮಗೆ ಗೊತ್ತಿತ್ತು. 1 ನೇ ಪ್ರತಿವಾದಿ ನಮ್ಮ ತಂದೆಯಿಂದ ಕೈಸಾಲ ಪಡೆದಿದ್ದರು ಎಂದರೆ ಸರಿಯಲ್ಲ. ಆ ಕಾರಣಕ್ಕಾಗಿ ನಾಮಿನಲ್ ಕ್ರಯಪತ್ರ ಮಾಡಿಕೊಟ್ಟಿದ್ದರು ಎಂದರೆ ಸರಿಯಲ್ಲ. ಒಟ್ಟು 4 ಎಕರೆ ಜಮೀನಿಗೆ ಸದರಿ ಕ್ರಯಪತ್ರ ಮಾಡಿಕೊಟ್ಟಿದ್ದರು ಎಂದರೆ ಸರಿಯಲ್ಲ. ಕೈಸಾಲವನ್ನು ಮರುಪಾವತಿಸಿದಾಗ

ಎರಡೂವರೆ ಎಕರೆ ಜಮೀನಿನ ಬಗ್ಗೆ ನಮ್ಮ ತಂದೆ ವಾಪಸ್ಸು ಕ್ರಯಪತ್ರ ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಸ್ವಲ್ಪ ಹಣ ಬಾಕಿ ಇರುವುದರಿಂದ ದಾವಾ ಸ್ವತ್ತನ್ನು ನಮ್ಮ ತಂದೆ ಹಾಗೆ ಇಟ್ಟುಕೊಂಡಿದ್ದರು ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನೂ ಸಹ ವಾಪಸ್ಸು ನೋಂದಣೆ ಮಾಡಿಕೊಳ್ಳಲು ಹೋದಾಗ ತುಂಡು ಭೂಮಿ ಕಾಯ್ದೆ ಜಾರಿಯಲ್ಲಿರುವುದರಿಂದ ಅದು ಸಾಧ್ಯವಾಗಲಿಲ್ಲ ಎಂದರೆ ಸರಿಯಲ್ಲ. ತುಂಡುಭೂಮಿ ಕಾಯ್ದೆ ವಾಪಸ್ಸು ತೆಗೆದುಕೊಂಡ ನಂತರ ನೋಂದಣಿ ಮಾಡಿಕೊಡುವುದಾಗಿ ಹೇಳಿದ್ದು, ಅಷ್ಟರಲ್ಲೇ ನಮ್ಮ ತಂದೆ ಮರಣ ಹೊಂದಿದರು ಎಂದರೆ ಸರಿಯಲ್ಲ. ಸದರಿ ವಿಚಾರ ಗೊತ್ತಿದ್ದೂ ಸಹ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾಸ್ವತ್ತಿನಲ್ಲಿ ಈಗಲೂ ಸಹ 1 ನೇ ಪ್ರತಿವಾದಿಯ ಮಕ್ಕಳು ಹಕ್ಕು ಸ್ವಾಧೀನತ್ವ ಹೊಂದಿದ್ದು ಬೇರೆಯವರಿಗೆ ಯಾವುದೇ ಅದಧಿಕಾರ ಇಲ್ಲ ಎಂದರೆ ಸರಿಯಲ್ಲ. ಒಂದು ವೇಳೆ ನಮಗೆ ಹಕ್ಕು ಇದ್ದಿದ್ದೇ ಆದಲ್ಲಿ ನಮ್ಮ ತಂದೆ ಮರಣ ಹೊಂದಿದ ತಕ್ಷಣ ಪೌತಿ ಖಾತೆ ಮಾಡಿಸುತ್ತಿದ್ದೆವು ಹಾಗೂ ನಮಗೆ ಹಕ್ಕು ಇಲ್ಲದ ಕಾರಣ ಆ ಬಗ್ಗೆ ಕ್ರಮ ಕೈಗೊಂಡಿಲ್ಲ ಎಂದರೆ ಸರಿಯಲ್ಲ. ಸರ್ವೆ ದಾಖಲೆಗಳಲ್ಲಿ 1 ನೇ ಪ್ರತಿವಾದಿ ಸ್ವಾಧೀನದಲ್ಲಿದ್ದಾರೆ ಎಂದು ನಮೂದಿಸಿದ್ದಾರೆ ಎಂದರೆ ಸರಿಯಲ್ಲ. ಆ ಬಗ್ಗೆ ಗೊತ್ತಿದ್ದೂ ಸಹ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಸ್ವಾಧೀನದಲ್ಲಿರುವುದನ್ನು ಪರಿಶೀಲಿಸಿ ಅಧಿಕಾರಿಗಳು ಅವರು ಸ್ವಾಧೀನ ಹೊಂದಿದ್ದಾರೆ ಎಂದು ನಮೂದಿಸಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ತಂದೆಗೆ ನಾವು ಇಬ್ಬರು ಗಂಡು ಮ್ಕಕಳು ಮತ್ತು ನಾಲ್ಕು ಜನ ಹೆಣ್ಣು ಮಕ್ಕಳು. ನನ್ನ ಸಹೋದರಿಯರು ವಿಭಾಗಕ್ಕಾಗಿ ನನ್ನ ವಿರುದ್ಧ ದಾವೆ ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ಆ ಬಗ್ಗೆ ಯಾವುದೇ ದಾವೆ ಚಾಲ್ತಿಯಲ್ಲಿ ಇಲ್ಲ. ಕೆಐಎಡಿಬಿ ಅಧಿಕಾರಿಗಳು ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ನೋಟೀಸನ್ನು 1 ನೇ ಪ್ರತಿವಾದಿಗೆ ನೀಡುತ್ತಿದ್ದರು ಎಂದರೇ ನನಗೆ ಗೊತ್ತಿಲ್ಲ. 2007 ರಿಂದ ಈವತ್ತಿನವರೆಗೆ ಪರಿಹಾರ ನೀಡುವಂತೆ ನಾನು 2 ನೇ ಪ್ರತಿವಾದಿಯನ್ನು ಕೋರಿರುವುದಿಲ್ಲ. ನನಗೂ ಮತ್ತು ದಾವಾ ಸ್ವತ್ತಿಗೂ ಸಂಬಂಧ ಇಲ್ಲದೇ ಇರುವುದರಿಂದ ಪರಿಹಾರ ಕೇಳಿರುವುದಿಲ್ಲ

ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಬಗ್ಗೆ ಖಾತೆ ಮಾಡಿಸಿಕೊಳ್ಳಲು ನಾನು ಯಾವುದೇ ಅರ್ಜಿ ಸಲ್ಲಿಸಿರುವುದಿಲ್ಲ. 1 ನೇ ಪ್ರತಿವಾದಿ ಖಾತೆ ಮಾಡಿಸಿಕೊಳ್ಳಲು ಉಪವಿಭಾಗಾಧಿಕಾರಿಗಳ ಎದುರು ಅರ್ಜಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರಿದು 2021 ರಲ್ಲಿ ಆ ಬಗ್ಗೆ ಗೊತ್ತಾಯಿತು ಎಂದು ನುಡಿಯುತ್ತಾರೆ. ಎಲ್ಲಾ ವಿಚಾರ ಗೊತ್ತಿದ್ದೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು 2 ನೇ ಪ್ರತಿವಾದಿ ವಶಪಡಿಸಿಕೊಂಡಾಗ ಪರಿಹಾರ ನಿರ್ಧರಣೆ ಮಾಡಲು ನನ್ನನ್ನು ಕರೆದಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನನಗೆ ಯಾವುದೇ ನೋಟೀಸು ಬಂದಿರುವುದಿಲ್ಲ. ಆ ಬಗ್ಗೆ ನಾನು ಯಾವುದೇ ಪ್ರಾಧಿಕಾರದ ಎದುರು ಪ್ರಶ್ನಿಸಿರುವುದಿಲ್ಲ. ನನಗೆ ದಾವಾ ಸ್ವತ್ತಿನ ಮೇಲೆ ಯಾವುದೇ ಹಕ್ಕು ಇಲ್ಲದೇ ಇದ್ದರೂ ಸಹ ಸುಳ್ಳು ದಾವೆ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಪರಿಹಾದ ಹಣವನ್ನು ಲಪಟಾಯಿಸಲು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲಾ.**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿಕೊಂಡಿರುತ್ತಾರೆ,

Sd/-
**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**